# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 31 (350) |
| 2 | ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 29-01-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಹಾಗೂ ಹೊಂದಿಕೊಂಡ ಪ್ರದೇಶದಲ್ಲಿ ದಾಖಲೆಗಳು ಶುದ್ಧ ಇಲ್ಲದಿರುವ ನಿವೇಶನಗಳನ್ನು ಖರೀದಿಸಿ ಜನ ಶೋಷಣೆಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು; | • ಹೌದು.<br><br>• ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಎಲ್ಲಾ ಸ್ವತ್ತುಗಳ ಕುರಿತು ಸಾರ್ವಜನಿಕರಿಗೆ ಪೂರ್ಣ ಪಾರದರ್ಶಕತೆ, ನಿಖರ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಇ-ಆಸ್ತಿ ತಂತ್ರಾಂಶವನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಇ-ಆಸ್ತಿ ತಂತ್ರಾಂಶವನ್ನು ರಾಜ್ಯ ಸರ್ಕಾರದ ಕಾವೇರಿ (ಸ್ವತ್ತು ನೋಂದಣಿ) ಹಾಗೂ ಭೂಮಿ (ಭೂ ದಾಖಲೆ) ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿರುತ್ತದೆ. |
| ಆ) | ಸರ್ಕಾರ Online ನಲ್ಲಿ ಯಾವುದೇ ಆಸ್ತಿಯ ದಾಖಲೆಗಳು ಪ್ರಕಟಿಸಿ ಖರೀದಿದಾರರು ಆಸ್ತಿಯನ್ನು ಖರೀದಿಸಲು ಅನುವಾಗುವಂತೆ ಮಾಹಿತಿಗಳನ್ನು ಜನತೆಗೆ ಒದಗಿಸುವ ಕಾರ್ಯ ಮಾಡುವುದೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಧೋರಣೆ ಹೊಂದಿದೆ; | • ಇ-ಆಸ್ತಿ ತಂತ್ರಾಂಶವನ್ನು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗುವಂತೆ ಪ್ರಚುರಪಡಿಸಲಾಗಿರುತ್ತದೆ. ಇದರಿಂದ ನಾಗರಿಕರು ಸಂಬಂಧಿತ ಸ್ವತ್ತುಗಳ ಖಾತೆಯ ನೈಜತೆಯನ್ನು ಆನ್‌ಲೈನ್‌ಮೂಲಕ ಸುಲಭವಾಗಿ ಪರಿಶೀಲಿಸಬಹುದಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. |

| | | |
|---|---|---|
| ಇ) | ಯಾವುದೇ ಆಸ್ತಿಯು ಸಂಪೂರ್ಣ ದಾಖಲಾತಿ ಶುದ್ಧತೆಯಿಂದ ಕೂಡಿದೆಯೆಂದು ದೃಢೀಕರಿಸಿಕೊಂಡ ನಂತರವೇ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಮಾಡುವ ಬಗ್ಗೆ ಸರ್ಕಾರ ನಿಯಮ ರಚಿಸಲು ಕೈಗೊಂಡಿರುವ ಕ್ರಮಗಳೇನು? | • ಸ್ವತ್ತುಗಳ ನೋಂದಣಿಯನ್ನು ಪ್ರಾಧಿಕಾರದಿಂದ ನೀಡಲಾದ ಅಂತಿಮ ಇ-ಖಾತಾಗಳ ಆಧಾರದ ಮೇಲೆ ಇಪಿಐಡಿ (EPID) ಸಂಖ್ಯೆಗಳ ಮೂಲಕ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.<br><br>• ಕಾವೇರಿ ತಂತ್ರಾಂಶದಲ್ಲಿ ಸ್ವತ್ತು ನೋಂದಣಿಯಾದ ನಂತರ ಸಂಬಂಧಿತ ವಿವರಗಳು ಸ್ವಯಂಚಾಲಿತವಾಗಿ ಇ-ಆಸ್ತಿ ತಂತ್ರಾಂಶಕ್ಕೆ ವರ್ಗಾವಣೆಗೊಳ್ಳುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.<br><br>• ಈ ವ್ಯವಸ್ಥೆಯ ಮೂಲಕ ತೆರಿಗೆದಾರರು ಹಾಗೂ ಸಾರ್ವಜನಿಕರು ಸ್ವತ್ತುಗಳನ್ನು ಖರೀದಿ ಮಾಡುವ ಮೊದಲು ಇ-ಆಸ್ತಿ ತಂತ್ರಾಂಶದಲ್ಲಿ ಸ್ವತ್ತಿನ ವಿವರಗಳು, ಖಾತೆಯ ಸ್ಥಿತಿ ಹಾಗೂ ನೋಂದಣಿಗೆ ಅರ್ಹತೆ ಇರುವುದೇ ಎಂಬುದನ್ನು ಮುಂಚಿತವಾಗಿ ಪರಿಶೀಲಿಸಿಕೊಳ್ಳಬಹುದಾಗಿರುತ್ತದೆ. |

**ಸಂಖ್ಯೆ:ನಅಇ 48 ಬಿಬಿಎಸ್ 2026**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ